# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ : ಕಸಾಪ / **ಪ್ರಕಟಣೆ**/ ೨೦೨೩-೨೪ ದಿನಾಂಕ : ೨೭-೦೬-೨೦೨೩

*ಇವರಿಗೆ*
**ಸಂಪಾದಕರು / ಮುಖ್ಯ ವರದಿಗಾರರು**
...............................................ಬೆಂಗಳೂರು

**ಪ್ರಕಟಣೆಯ ಕೃಪೆಗಾಗಿ**

## ನಾಡಪ್ರಭು ಕೆಂಪೇಗೌಡರಿಗೆ ನಾವು ಚಿರ ಋಣಿಯಾಗಬೇಕು - ನಾಡೋಜ ಡಾ. ಮಹೇಶ ಜೋಶಿ ವಿಶ್ಲೇಷಣೆ

ಬೆಂಗಳೂರು-೧೬ನೇಯ ಶತಮಾನ ಭಾರತದಲ್ಲಿ ಸುವರ್ಣ ಯುಗ ಎಂದು ಕರೆಸಿಕೊಂಡಿದೆ. ಆ ಕಾಲ ಘಟ್ಟದಲ್ಲಿ ಇದ್ದ ರಾಜಮನೆತನಗಳಲ್ಲಿ ವಿಜಯನಗರದ ವೈಭವವನ್ನು ಕಂಡು ಬೆರಗಾಗಿ ಅಂತಹದೇ ಸಾಮ್ರಾಜ್ಯವನ್ನು ಬೆಂಗಳೂರಿನಲ್ಲಿ ಕಟ್ಟ ಬೇಕು ಎನ್ನುವ ಕನಸು ಕಂಡವರು ನಾಡಪ್ರಭು ಕೆಂಪೆಗೌಡರು ಎಂದು **ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ** ಅವರು ಬಣ್ಣಿಸಿದರು.

ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಪಂಪ ಸಭಾಂಗಣದಲ್ಲಿ ಹಮ್ಮಿಕೊಂಡ **ನಾಡಪ್ರಭು ಕೆಂಪೇಗೌಡರ ೫೧೪ನೇ ಜಯಂತ್ಯೋತ್ಸವ**ದಲ್ಲಿ ಅವರು ಭಾಗವಹಿಸಿ ಮಾತನಾಡುತ್ತಿದ್ದರು. ಆಧುನಿಕ ಬೆಂಗಳೂರಿನ ನಿರ್ಮಾಪಕರಾದ ಕೆಂಪೇಗೌಡರು ಸುಖ ಶಾಂತಿ ಸಮೃದ್ಧಿಯ ಆಧಾರದ ಮೇಲೆ ಸಾಮಾಜ್ಯವನ್ನು ಕಟ್ಟಿದರು. ನಾಡಿಗೆ ನೀರಿನ ವ್ಯವಸ್ಥೆ ಅತೀ ಮುಖ್ಯ ಎಂದು ಗುರುತಿಸಿ ಇನ್ನೂರಕ್ಕೂ ಹೆಚ್ಚು ಕೆರೆಗಳನ್ನು ಕಟ್ಟಿಸಿದ್ದರು. ಆಧ್ಯಾತ್ಮಕ್ಕೆ ಮಹತ್ವವನ್ನು ನೀಡಿ ಗವಿಗಂಗಾಧರೇಶ್ವರ, ಕೋಟೆ ವೆಂಕಟರಮಣ, ಬಸವನ ಗುಡಿಯ ದೊಡ್ಡ ಬಸವಣ್ಣ, ಶಿವಗಂಗೆಯ ಗಂಗಾಧರೇಶ್ವರ ಮೊದಲಾದ ಅನೇಕ ದೇವಸ್ಥಾನಗಳನ್ನು ಸ್ಥಾಪನೆ ಮಾಡಿ ಧಾರ್ಮಿಕ ಸೌಹಾರ್ಧತೆಯನ್ನು ರೂಪಿಸಿದ್ದರು. ಉದ್ಯಾನವನಗಳ ಸ್ಥಾಪನೆಗೆ ಹೆಚ್ಚಿನ ಮಹತ್ವವನ್ನು ನೀಡಿ ಬೆಂಗಳೂರನ್ನು ಉದ್ಯಾನ ನಗರಿಯನ್ನಾಗಿಸಿದ್ದರು. ಉದ್ಯೋಗ ಮತ್ತು ಪದಾರ್ಥಗಳ ಆಧಾರದ ಮೇಲೆ ಅಕ್ಕಿ ಪೇಟೆ, ಬಿನ್ನಿ ಪೇಟೆ, ತರಗು ಪೇಟೆ, ಕುಂಬಾರ ಪೇಟೆ ಮೊದಲಾದ ಬಡಾವಣೆಗಳನ್ನು ನಿರ್ಮಿಸಿದ್ದರು. ಎಲ್ಲಾ ಸಮುದಾಯದವರನ್ನು ಸಮಾನವಾಗಿ ಕಂಡು ಶಾಂತಿ ಸೌಹಾರ್ಧತೆಯನ್ನು ರೂಪಿಸಿದ್ದವರು ನಾಡಪ್ರಭು ಕೆಂಪೇಗೌಡ ಅವರು ಎಂದು **ನಾಡೋಜ ಡಾ. ಮಹೇಶ ಜೋಶಿ** ಹೇಳಿದರು.

ಪ್ರಕೃತಿ ಮತ್ತು ಮಾನವನ ನಡುವೆ ಸಮತೋಲನ ರೂಪಿಸಲು ಅನೇಕ ಮಹತ್ವದ ಯೋಜನೆಗಳನ್ನು ಕೆಂಪೇಗೌಡರು ರೂಪಿಸಿದ್ದರು. ಬೆಂಗಳೂರಿನ ಸರಹದ್ದನ್ನು ನಿರ್ಧರಿಸಲು ನಾಲ್ಕು ಕಾವಲು ಗೋಪುರಗಳನ್ನು ಅವರು ನಿರ್ಮಾಣ ಮಾಡಿದ್ದರು. ಅವುಗಳನ್ನು ಮಿರಿ ಬೆಳೆದಿದ್ದೇ ಬೆಂಗಳೂರಿನ ಇಂದಿನ ಅನಾಹುತಗಳಿಗೆ ಕಾರಣ. ಅವರು ಉತ್ತಮ ಒಳಚರಂಡಿ, ವಿನ್ಯಾಸದಿಂದ ರೂಪಿಸಿದ್ದ ರಾಜಾ ಕಾಲುವೆಯನ್ನು ನಾವು ಇಂದು ಸರಿಯಾಗಿ ಬಳಸಿಕೊಳ್ಳದಿರುವುದು ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳಿಗೆ ಕಾರಣವಾಗಿದೆ. ಆಧುನಿಕ ಬೆಂಗಳೂರು ನಾಡ ಪ್ರಭು ಕೆಂಪೇಗೌಡರಿಗೆ ಋಣಿಯಾಗಿರುವಂತೆ ಅವರಿಂದ ಪಾಠವನ್ನು ಕೂಡ ಕಲಿಯ ಬೇಕಿದೆ ಎಂದು **ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ** ಎಚ್ಚರಿಸಿದರು.

ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ **ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ** ಹಾಗೂ ಪರಿಷತ್ತಿನ ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಪುಷ್ಪನಮನವನ್ನು ಸಲ್ಲಿಸಿದರು. **ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ನೇ.ಭ.ರಾಮಲಿಂಗ ಶೆಟ್ಟಿ, ಡಾ. ಪದ್ಮಿನಿ ನಾಗರಾಜು ಕೋಶಾಧ್ಯಕ್ಷರಾದ ಡಾ. ಬಿ.ಎಮ್.ಪಟೇಲ್ ಪಾಂಡು, ಪ್ರಕಟಣಾ ವಿಭಾಗದ ಸಂಚಾಲಕರಾದ ಪ್ರೊ. ಎನ್. ಎಸ್. ಶ್ರೀಧರ ಮೂರ್ತಿ, ವಿಶೇಷ ಕರ್ತವ್ಯಾಧಿಕಾರಿ ಶ್ರೀ ಚಿಕ್ಕತಿಮ್ಮಯ್ಯ ಸಿ. ಹಾಗೂ ಸಿಬ್ಬಂದಿಗಳು** ನಾಡಪ್ರಭು ಕೆಂಪೇಗೌಡರ ಜಯಂತ್ಯೂತ್ಸವದ ಪುಷ್ಪನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಛಾಯಾಚಿತ್ರ: ಕನ್ನಡ ಸಾಹಿತ್ಯ ಪರಿಷತ್ತಿನ ಪಂಪ ಸಭಾಂಗಣದಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಹಾಗೂ ಪರಿಷತ್ತಿನ ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಪುಷ್ಪನಮನವನ್ನು ಸಲ್ಲಿಸಿದರು.**

**ಶ್ರೀನಾಥ್ ಜೆ.**
ಮಾಧ್ಯಮ ಸಲಹೆಗಾರರು
ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು